ಅಂದ್ಕೊಂಡ್ರಾ ಹೇಗೆ?...' ಅಂತ. ಪಟೇಲರ ಮಾತಿನಿಂದ ದಿಢೀರನೆ ಅಲ್ಲೊಂದು ನಗುವಿನ ಅಲೆ ಎದ್ದು, ಅದು ನಿಧಾನಕ್ಕೆ ಇಂಗುವಷ್ಟರಲ್ಲಿ ಅಂಗಳದ ಬಲಬದಿ ಮೂಲೆಯ ಓರೆಯಿಂದ ಇದ್ದಕ್ಕಿದ್ದಂತೆ ಒಂದು 'ಅಸ್ಸಲಾಂ ಅಲೈಕುಂ' ಕೇಳಿಬಂದಿತ್ತು. ಎಲ್ಲರೂ ಆ 'ಅಶರೀರ' ಧ್ವನಿಯತ್ತ ಕಣ್ಣು ಹಾಯಿಸಿದಾಗ ಕ್ಷಣಮಾತ್ರದಲ್ಲಿ ಅವರ ಕಣ್ಣಿಗೆ ಬಿದ್ದವ ಬಲಗೈಯಲ್ಲಿ ತೆಂಗಿನ ಗರಿಕಡ್ಡಿಗಳಲ್ಲಿ ಸುರಿದಿದ್ದ ಬಂಗುಡೆ, ಕೊಡ್ಡೆಯಿ ಮೀನುಗಳ ಸರಮಾಲೆಗಳನ್ನು ಹಿಡಿದಿದ್ದ ಹುಸೇನ್‌ಬ್ಯಾರಿ!

'...ಅರೆರೆ, ನೀನೆಲ್ಲಿಂದ ಬಂದೆ ಮಾರಾಯ ದಿಢೀರನೆ ಇಲ್ಲಿಗೆ ಆಲಿಭೂತದಂತೆ!?... ಅದೂ ಈ ಅಡ್ಡ ಹೊತ್ತಿಗೆ!?' ಎಂದು ದೇವು ಪಟೇಲರು ಅಚ್ಚರಿ ಭಾವದಲ್ಲಿ ಆತನನ್ನು ಕೇಳುತ್ತಿದ್ದಂತೆ, ಕಾದ್ರಿಬ್ಯಾರಿಗಳು ಮುಗುಳ್ನಗುತ್ತಾ ಅಂದಿದ್ದರು: 'ಇಂವನಿಗೆ ಈssss ಮಾವನ ಮನೆಗೆ ಬರುದಕ್ಕೆ ಹೊತ್ತು ಗೊತ್ತು... ಅಂತ ಉಂಟಾ ದನಿಗಳೇ? ಇಂವ ನನ್ನ ಸ್ವಂತ ಅಕ್ಕನ ಮಗನೇ ಅಲ್ವಾ?... ಇಂವನನ್ನು ನಾನೇ ಎತ್ತಿ ಬೆಳೆಸಿದವನು. ಕೊನೇಗೆ ಇಂವ... ಈ ಮಾವನ ಮನೆ ಬಿಟ್ಟು ಹೋಗುದೇ ಇಲ್ಲ ಅಂತ ಹಟ ಹಿಡಿದಾಗ, ನಾನೇ ನನ್ನ ಕೊನೆ ಮಗಳನ್ನು 'ಕೊಟ್ಟು' ಇಂವನನ್ನು ಹೊರ ಹಾಕಬೇಕಾಯಿತು ಅಷ್ಟೆ' ಎಂದು ಹೇಳಿ ಮತ್ತೊಂದು ನಗೆ ಬುಗ್ಗೆಯನ್ನು ಅಲ್ಲಿ ಎಬ್ಬಿಸಿದ್ದರು.

ಹುಸೇನ್‌ಬ್ಯಾರಿ ನಗುತ್ತ... ಮಾವನನ್ನು ಆರಾಧನಾ ಭಾವದಿಂದ ದಿಟ್ಟಿಸಿದವನೇ, ಅಂಗಳಕ್ಕೆ ಬಂದಿರುವ ಊರನೆಂಟರನ್ನು ಗೌರವಪೂರ್ವಕವಾಗಿ ಮಾತನಾಡಿಸುತ್ತ, ಅವರು ಆ ಅಂಗಳಕ್ಕೆ ಬಂದ ಸಕಾರಣವನ್ನು ವಿಚಾರಿಸಿದ್ದ. ಇದೀಗ ದೇವಪ್ಪ ಶೆಟ್ಟರಿಂದ 'ಕೊಡಿಮರ'ದ ಹೊಸಕತೆ ಕೇಳುತ್ತಲೇ ಆತ 'ಅರೆ... ಬಾಪ್ಪ! ಛೇsss, ಛೇsss, ಛೇsss ಎಂತಹ ಕೆಲ್ಸ ಆಗಿ ಹೋಯ್ತು ಮಾರಾಯ್ರೇ! ಆ ಮರದಲ್ಲಿ ಟೊಳ್ಳು ಇದೆ ಅಂತ ನಿಮಗಾದ್ರು ಗೊತ್ತಾಗ್ಬೇಕಿತಲ್ವ ಆಚಾರ್ರೆ?' ಒಂದು ಮರವನ್ನು ಸಾಯಿಸೋದು ತಪ್ಪುತಿತ್ತಾ? ಎಂದು ಶ್ರೀಧರಾಚಾರಿಯನ್ನು ತುಸು ಆಕ್ಷೇಪಣಾ ಧ್ವನಿಯಲ್ಲಿ ಪ್ರಶ್ನಿಸಿದ್ದ.

'ಅದ್ಹೇಗೆ ನಂಗೆ ಗೊತ್ತಾಗುತ್ತೆ ಮಾರಾಯ?... ಬಸುರಿನೊಳಗಿರುವ ಮಗು ಗಂಡಾ... ಹೆಣ್ಣಾ... ಅಂತ ನಿನ್ನ ಕಣ್ಣ ದಿಟ್ಟಿಗೆ ಹೇಗೆ ಗೊತ್ತಾಗುದಿಲ್ಲವೋ ಹಾಗೆ, ನಮಗೂ ಮರದೊಳಗೆ ಟೊಳ್ಳು ಇದೆಯೋ ಇಲ್ವೋ... ಆ ಟೊಳ್ಳು ಸಣ್ಣದೋ... ದೊಡ್ಡದೋ... ಅಂತ ಗೊತ್ತಾಗುದು ಅದನ್ನು ಕಡಿದ ನಂತರದಲ್ಲೆ. ಅದ್ರಲ್ಲೂ, ಆ ಒಳಟೊಳ್ಳಿನಿಂದ ಮರದ ಜೀವಕ್ಕೇನೂ ಸಂಚಕಾರ ಬಂದಿಲ್ಲದ್ದರಿಂದ ನಮಗ್ಯಾರಿಗೂ ಆ ಮರದೊಳಗೆ ಆ ಟೊಳ್ಳಿದೆ ಅಂತ ಗೊತ್ತೇ ಆಗಲಿಲ್ಲ ಮಾರಾಯ...'

'ಅಲ್ಲ ಧನಿಗಳೇ... ಈ ಮರದ ದೆಸೆಯಿಂದ ನಮ್ಮ ತಿಂಮಪೂಜಾರಿ ಅದರ ಚಿಂತೆಯಲ್ಲೆ ನೊಂದೂ, ಬೆಂದು, ಈಗಲ್ಲಿ ಮಸಣ ಸೇರ್ಬೇಕಾಯಿತಲ್ಲ; ನೀವು ಕೊಂದ ಆ ಮರಕ್ಕೇನಾದ್ರೂ ನಮ್ಮ ಹಾಗೆ ಸೀದ ಬಾಯಿ ಬರ್‍ತಿದ್ರೆ... ಅದು ತನ್ನ 'ಅಪ್ಪ' ತಿಂಮನ ದುಃಖ, ಚಿಂತೆಯನ್ನು ಕಂಡು, ತನ್ನನ್ನು ಕಡಿವವರಿಗೆ ಚೀರಿಬಿಟ್ಟು ಹೇಳುತ್ತಿತ್ತೋ ಏನೋ 'ಕಡಿಬೇಡ್ರಪ್ಪಾ... ನನ್ನೊಳಗೆ ಟೊಳ್ಳು ಇದೆ... ನಾನು ದೇವರಿಗಾಗುವನು ಅಲ್ಲಾ...' ಅಂತ...'

ಹುಸೇನಬ್ಯಾರಿಯು, ತಿಂಮ ಮತ್ತು ಮರದ ಬಗ್ಗೆ ಕರುಳು ಕುದಿಸಿಕೊಂಡು ಹೀಗೆ ಮಾತನಾಡುತ್ತಿದ್ದರೂ ಅಂಗಳದಲ್ಲಿದ್ದ ಪರಜಾತಿಯ ನೆಂಟರಿಬ್ಬರೂ ತುಟಿಪಿಟಿಕ್ಕೆನ್ನಲಿಲ್ಲ. ಆದರೆ ಅವರಿಬ್ಬರನ್ನೂ ಅಪರಾಧಿ ಪ್ರಜ್ಞೆಯ ಸುಳಿಯೊಂದು ಈಗ ಬಲವಾಗಿ ಅಮುಕುತ್ತಿದೆ ಎಂಬುದು ಕಾದ್ರಿಬ್ಯಾರಿಯವರಿಗೆ ತಟ್ಟನೆ ತಿಳಿಯುತ್ತಿದ್ದಂತೆ ಅವರು ವಿಷಯಾಂತರ ಮಾಡಬೇಕೆಂದು ಯೋಚಿಸುವಷ್ಟರಲ್ಲಿ ಆ ಹುಸೇನಬ್ಯಾರಿ ಮತ್ತೆ ತನ್ನ ಮಾತನ್ನು ಮುಂದುವರಿಸಿದ್ದ. 'ಛೇ... ಆ ತಿಂಮಪೂಜಾರಿ ಇವತ್ತೇನಾದ್ರೂ ಬದುಕಿರ್‍ತಿದ್ದರೆ... ಈ ಮರದ 'ಈ ರೀತಿಯ ಅಂತ್ಯ'ವನ್ನು ಕಂಡು, ಅಂವ ಇನ್ನೆಷ್ಟು ಗೋಳಾಡ್ತಿದ್ದನೋ ಏನೋ? ನನ್ನ ಆ ಮರ ಅತ್ತ ಬದುಕಿಯೂ ಬದುಕ್ಲಿಲ್ಲ, ಇತ್ತ ದೈವಕ್ಕೂ